# ಟ್ವಿಟ್ಟರ್: ಹಣ ಗಳಿಕೆಯ ಬೆಳಕಿಂಡಿ

■ **ಶಶಿಕುಮಾರ್ ಸಿ.**

ಇಷ್ಟು ದಿನ 'ಪೋಸ್ಟ್' ಮಾಡಲಷ್ಟೇ ಬಳಸುತ್ತಿದ್ದ ಟ್ವಿಟ್ಟರ್ ಅನ್ನು ಇನ್ನು ಮುಂದೆ ಹಣ ಸಂಪಾದಿಸಲೂ ಬಳಸಬಹುದು. ಹೌದು ಇಂಥದ್ದೊಂದು ಫೀಚರ್ ಅನ್ನು ಟ್ವಿಟ್ಟರ್ ಶೀಘ್ರವೇ ಪರಿಚಯಿಸಲಿದೆ.

10 ಸಾವಿರಕ್ಕೂ ಅಧಿಕ ಫಾಲೋವರ್ಸ್ (ಟ್ವಿಟ್ಟರ್ ಖಾತೆಯ ಹಿಂಬಾಲಕರು) ಹೊಂದಿರುವ ಖಾತೆದಾರರು, ತಮ್ಮ ಪೋಸ್ಟ್‌ಗಳು ಹಾಗೂ ಕಂಟೆಂಟ್ ಅನ್ನು ನೋಡಲು ತಮ್ಮ ಫಾಲೋವರ್ಸ್‌ಗಳಿಗೆ ಇಂತಿಷ್ಟು ಹಣ ಪಾವತಿಸಬೇಕು ಎಂದು ನಿಗದಿಪಡಿಸಬಹುದು. ಈ ಮೂಲಕ ಹಣ ಸಂಪಾದಿಸಬಹುದು. ಈ ಫೀಚರ್ ಬಗ್ಗೆ ಕಳೆದ ಫೆಬ್ರುವರಿಯಲ್ಲೇ ಟ್ವಿಟ್ಟರ್ ಹೇಳಿಕೊಂಡಿತ್ತು. ತಾವು ಫಾಲೋ ಮಾಡುವ ಖಾತೆಯಿಂದ ಹೆಚ್ಚುವರಿ ಕಂಟೆಂಟ್ ಪಡೆಯಲು ಟ್ವಿಟ್ಟರ್ ಬಳಕೆದಾರರು ಶುಲ್ಕ ಪಾವತಿ ಮಾಡುವ 'ಸೂಪರ್ ಫಾಲೋವರ್ಸ್' ಫೀಚರ್ ಅಭಿವೃದ್ಧಿಯಲ್ಲಿ ಟ್ವಿಟ್ಟರ್ ಈಗಾಗಲೇ ತೊಡಗಿದ್ದು, ಅದು ಅಂತಿಮ ಹಂತದಲ್ಲಿದೆ. ಕೆಲವು ತಿಂಗಳುಗಳಲ್ಲಿ ಅದು ಬಿಡುಗಡೆಯಾಗಲಿದೆ.



'ಸೂಪರ್ ಫಾಲೋಸ್' ಅಪ್ಲಿಕೇಷನ್ ಪರಿಚಯಿಸಲು ಟ್ವಿಟ್ಟರ್ ಕೆಲಸ ಮಾಡುತ್ತಿದೆ. ಕನಿಷ್ಠ 10 ಸಾವಿರ ಫಾಲೋವರ್ಸ್ ಹೊಂದಿರುವ, ಕಳೆದ 30 ದಿನಗಳ ಅವಧಿಯಲ್ಲಿ ಕನಿಷ್ಠ 25 ಟ್ವೀಟ್ ಪೋಸ್ಟ್ ಮಾಡಿರುವ ಹಾಗೂ ಕನಿಷ್ಠ 18 ವರ್ಷ ವಯಸ್ಸಾಗಿರುವ ಖಾತೆದಾರರು ಈ ಫೀಚರ್ ಆ್ಯಕ್ಟಿವೇಟ್ ಮಾಡಲು ಅರ್ಹರಾಗಿರುತ್ತಾರೆ. ಇನ್ನು ಸೂಪರ್ ಫಾಲೋಸ್ ಬಳಕೆದಾರರು ಆಯ್ಕೆ ಮಾಡಲು ವಿವಿಧ ಕಂಟೆಂಟ್‌ಗಳ ಪಟ್ಟಿಯೊಂದನ್ನು ಟ್ವಿಟ್ಟರ್ ತಯಾರಿಸಿದೆ. 'ವಯಸ್ಕರ ಕಂಟೆಂಟ್' ಹಾಗೂ 'ಓನ್ಲಿ ಫ್ಯಾನ್ಸ್' ಕ್ಯಾಟಗರಿಗಳೂ ಅದರಲ್ಲಿವೆ ಎನ್ನಲಾಗಿದೆ.

ಸೂಪರ್ ಫಾಲೋಸ್ ಎಂಬುದು ಟ್ವಿಟ್ಟರ್ ಬಳಕೆದಾರರಿಗೆ ತಮ್ಮ ಫಾಲೋವರ್ಸ್‌ಗಳಿಗೆ ಬೋನಸ್ ಟ್ವೀಟ್ ಒಳಗೊಂಡಂತೆ ಹೆಚ್ಚುವರಿ ಕಂಟೆಂಟ್ ನೀಡುವ, ಕಮ್ಯುನಿಟಿ ಗ್ರೂಪ್‌ಗಳಿಗೆ ಪ್ರವೇಶ ನೀಡುವ, ನ್ಯೂಸ್ ಲೆಟರ್ ಸಬ್‌ಸ್ಕ್ರಿಪ್ಷನ್ ನೀಡುವ ಅಥವಾ ಯೂಸರ್ ಸಪೋರ್ಟ್ ಬ್ಯಾಜ್ ನೀಡುವ ಅವಕಾಶವಿದ್ದು, ಇದರಲ್ಲಿ ಯಾವುದನ್ನಾದರೂ ಪಡೆಯಬಯಸುವ ತಮ್ಮ ಫಾಲೋವರ್ಸ್‌ಗಳಿಂದ ಹಣ ಪಡೆಯಬಹುದು.

ಸೂಪರ್ ಫಾಲೋಸ್ ಬಳಕೆದಾರರ ಪ್ರೊಫೈಲ್ ಪೇಜ್ ಒಂದರ ಯೂಸರ್ ಇಂಟರಫೇಸ್ ಅನ್ನು ಮೇ ತಿಂಗಳಲ್ಲಿ ಸಾರ್ವಜನಿಕವಾಗಿ ಹಂಚಿಕೊಳ್ಳಲಾಗಿತ್ತು. ಇದರಲ್ಲಿ ಸೂಪರ್ ಫಾಲೋ ಬಟನ್ ಎರಡು ರೀತಿಗಳಲ್ಲಿ ಇರುವುದು ತಿಳಿದಿತ್ತು.

ತನ್ನ ಪ್ಲಾಟ್‌ಫಾರ್ಮ್ ಅನ್ನು ಹಣ ಗಳಿಕೆಗಾಗಿ ಮಾರ್ಪಡಿಸಲು ಟ್ವಿಟ್ಟರ್ ಕಳೆದ ಕೆಲ ತಿಂಗಳುಗಳಿಂದ ಕ್ರಿಯಾಶೀಲವಾಗಿತ್ತು. ಸದ್ಯದಲ್ಲೇ 'ಟ್ವಿಟ್ಟರ್ ಬ್ಲ್ಯೂ' ಎಂಬ ಹೊಸ ಫೀಚರ್ ಕೂಡ ಬರಲಿದ್ದು, ಅದು ಅಮೆರಿಕದ ಬಳಕೆದಾರರಿಗೆ ಮೊದಲು ಸಿಗಲಿದೆ. ನಂತರ ಭಾರತೀಯ ಬಳಕೆದಾರರಿಗೆ. ಇದಕ್ಕಾಗಿ 269 ರೂಪಾಯಿ ಶುಲ್ಕ ವಿಧಿಸಲಾಗುವುದು ಎನ್ನಲಾಗಿದೆ. ■

## 5ಜಿ: ಆರೋಗ್ಯಕ್ಕೆ ಹಾನಿಕರವಲ್ಲ!

ಕೆಲವು ಟೆಲಿಕಾಂ ಸಂಸ್ಥೆಗಳು ದೇಶದಲ್ಲಿ ಈಗಾಗಲೇ 5 ಜಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವತ್ತ ದಾಪುಗಾಲು ಇಟ್ಟಿದ್ದರೆ, ಈಚೆಗೆ ಆ ಕುರಿತು ಕಳವಳಕಾರಿ ಸುದ್ದಿಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬಿಕೊಂಡಿತ್ತು. 5ಜಿ ತಂತ್ರಜ್ಞಾನವು ಆರೋಗ್ಯಕ್ಕೆ ಹಾನಿಕಾರಕ, ಅದು ಸುರಕ್ಷಿತವಲ್ಲ ಎಂಬುದು ಆ ವರದಿ. ಈ ವರದಿ ಸುಳ್ಳೆಂದು 'ಸೆಲ್ಯುಲರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ' ಸ್ಪಷ್ಟನೆ ನೀಡಿದೆ.

5ಜಿ ತಂತ್ರಜ್ಞಾನದಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ ಎಂಬ ವರದಿಗಳು ಸಂಪೂರ್ಣ ನಿರಾಧಾರವಾಗಿವೆ. ಆ ಬಗ್ಗೆ ನಂಬಲರ್ಹ ಯಾವುದೇ ಸಾಕ್ಷಿಗಳಿಲ್ಲ. ಅಲ್ಲದೇ, ಹೊಸ ತಂತ್ರಜ್ಞಾನವು ಆರ್ಥಿಕತೆ ಹಾಗೂ ಸಮಾಜದ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಲಿದೆ ಎಂದು ಒಕ್ಕೂಟವು ಹೇಳಿದೆ.

ಟೆಲಿಕಾಂ ಕ್ಷೇತ್ರದಲ್ಲಿ ಎಲೆಕ್ಟ್ರೊಮ್ಯಾಗ್ನೆಟಿಕ್ ತರಂಗಾಂತರಗಳ ಬಳಕೆಯ ನಿಯಮಗಳು ಕಠಿಣವಾಗಿವೆ. ಇವುಗಳ ಹಂಚಿಕೆ ವಿಧಾನದಲ್ಲೂ ಭಾರತವು ಅತ್ಯಂತ ಕಟ್ಟುನಿಟ್ಟಾದ ನಿಯಮಗಳನ್ನು ಹೊಂದಿದೆ. ಜಾಗತಿಕ ಮಾನದಂಡಗಳಿಗಿಂತಲೂ ಈ ನಿಯಮಗಳು ಹೆಚ್ಚು ಕಠಿಣವಾಗಿವೆ ಎಂದು ತಿಳಿಸಿದೆ.

ಜಾಗತಿಕವಾಗಿ ಒಪ್ಪಲಾದ ರೇಡಿಯೇಷನ್ ಮಟ್ಟಕ್ಕೆ ಹೋಲಿಸಿದರೆ ಅದರ ಹತ್ತನೇ ಒಂದು ಭಾಗದಷ್ಟು ರೇಡಿಯೇಶನ್‌ಗೆ ಮಾತ್ರ ಭಾರತದಲ್ಲಿ ಅನುಮತಿ ಇದೆ. ನಮ್ಮ ದೇಶವು ಈಗಾಗಲೇ ಈ ವಿಷಯದಲ್ಲಿ ಜಾಗರೂಕವಾಗಿದ್ದು, 5ಜಿ ವಿಷಯದಲ್ಲಿ ಆರೋಗ್ಯ ಸಮಸ್ಯೆಗಳ ಮಾತುಗಳು ನಿರಾಧಾರ. ಯಾವುದೇ ಹೊಸ ತಂತ್ರಜ್ಞಾನವನ್ನು ಪರಿಚಯಿಸುವಾಗ ಇಂಥ ಊಹಾಪೋಹಗಳು ಸಾಮಾನ್ಯ ಎಂದು 'ಸಿಒಎಐ' ಡೈರೆಕ್ಟರ್ ಜನರಲ್ ಎಸ್.ಪಿ. ಕೊಚ್ಚರ್ ಸ್ಪಷ್ಟಪಡಿಸಿದ್ದಾರೆ.

ದೇಶದಲ್ಲಿ 5ಜಿ ವೈರ್‌ಲೆಸ್ ನೆಟ್‌ವರ್ಕ್ ಆರಂಭಿಸಬಾರದು ಎಂದು ನಟಿ ಜೂಹಿ ಚಾವ್ಲಾ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈಚೆಗೆ ಆ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು, ಜೂಹಿ ಅವರ ಅರ್ಜಿಯು



ಊರ್ಜಿತವಲ್ಲ, ಅವರ ಆರೋಪ ನಿರಾಧಾರವೆಂದು ಹೇಳಿ ವಜಾ ಮಾಡಿದೆ. ಅವರಿಗೆ ಹಾಗೂ ಅವರ ಜೊತೆಯಲ್ಲಿ ಅರ್ಜಿ ಸಲ್ಲಿಸಿದ್ದವರಿಗೆ 20 ಲಕ್ಷ ರೂಪಾಯಿ ದಂಡ ವಿಧಿಸಿದೆ.

ಜೂಹಿ ಚಾವ್ಲಾ ಹಾಗೂ ಇನ್ನಿಬ್ಬರು ಅರ್ಜಿದಾರರು ಕಾನೂನಿನ ದುರುಪಯೋಗ ಮಾಡಿದ್ದಾರೆ. ಅಲ್ಲದೆ ಅವರು ನ್ಯಾಯಾಲಯದ ಸಮಯ ಹಾಳು ಮಾಡಿದ್ದಾರೆ. ಇವರು ಸಲ್ಲಿಸಿದ ಅರ್ಜಿಯು ಬರೀ ಊಹಾತ್ಮಕ, ಅನಗತ್ಯ ಹಾಗೂ ದುರುದ್ದೇಶದ ಅಂಶಗಳನ್ನೇ ಹೊಂದಿದೆ ಎಂದೂ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿತ್ತು. ನ್ಯಾಯಾಲಯದ ಆದೇಶವನ್ನು ಸ್ವಾಗತಿಸಿರುವ ಕೊಚ್ಚರ್, ದುರುದ್ದೇಶಪೂರ್ವಕ ವದಂತಿಗಳ ಹರಡುವಿಕೆಗೆ ಇದು ಕಡಿವಾಣ ಹಾಕಲಿದೆ. ಸುಳ್ಳು ಸುದ್ದಿ ಹರಡುವ ದುಸ್ಸಾಹಸ ಮಾಡಲು ಯತ್ನಿಸುವವರಿಗೆ ಈ ಆದೇಶ ತಡೆ ಒಡ್ಡಲಿದೆ ಎಂದಿದ್ದಾರೆ.

5ಜಿ ತಂತ್ರಜ್ಞಾನದಿಂದ ಆರೋಗ್ಯಕ್ಕೆ ಹಾನಿಯಾಗಲಿದೆ ಎಂಬ ಆಡಿಯೋ ವಿಡಿಯೋಗಳಿರುವ ಅದೆಷ್ಟೋ ಸಂದೇಶಗಳು ಕಳೆದ ಕೆಲವು ತಿಂಗಳುಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಕೋವಿಡ್19 ವೈರಸ್ ಹರಡಲು 5ಜಿ ತರಂಗಾಂತರಗಳೇ ಕಾರಣ ಎಂದೂ ಕೆಲವರು ಅಪಪ್ರಚಾರ ಮಾಡಿದ್ದರು. ■